ತಾರೀಖು 16ನೆ ಮಾರ್ಚ 1907.

ನಂ. ರೆ. 8404-ಲ್ಯಾ. ರೆ. 477-06-3, ಸ್ರ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇರ್ಷ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮರಹವ್ಮತ್ತು ಇಲಾಖೆಯವರು ಗ್ರಾವೆಲ್ ತೆಗೆದುಕೊಳ್ಳುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೃಷ್ಣರಾಜಪೇಟೆ ಸಬ್ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದಿಸುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನಿನ ಒಡೆಯರ ಅಥವಾ ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ಅಥವಾ ಬಾಗಾಯ್ತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಾಗಮಂಗಲ	ಹೊನಕೆರೆ	ಕೋಣನೂರು	1. ಕೃಷ್ಣಬಿ ಹೊನ್ನ, 2. ಶಿವರ, 3. ಚೌರಣ್ಣ, 4. ಕೃಷ್ಣ.	ಸರ್ವೆ ನಂಬರು 67 ಪೈಕಿ 1ನೆ ಭಾಗ	ಖುಷ್ಕಿ	ಎ. ಗು. 1 39	ರೂ. ಆ. 2	ಎ. ಗು. 0 17		ಹೈರೋಜು	ಬಿಪ್ಪರಗೌಡನ ಜಮೀನು	ಈರಣ್ಣನ ಜಮೀನು	ಜಿನ್ನೆಬೋಗೌಡನ ಜಮೀನು

ತಾರೀಖು 26ನೆ ಮಾರ್ಚ 1907.

ನಂ. ಆರ್. 8808—ಎಲ್. ಆರ್. 499-06—2, ಸ್ರ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷರ್ ರಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಬೆಂಗಳೂರಿನಲ್ಲಿ ಲಾ ಕೋರ್ಟುಗಳಿಗೋಸ್ಕರ ಒಂದು ಹೊಸ ಕಟ್ಟಡವನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಡಿಪ್ಯೂಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
						ವಿಸ್ತೀರ್ಣ:	ಕಂದಾಯ	ಪೂರ್ವ.	ಪಶ್ಚಿಮ ವಾಯುವ್ಯ ನೈರುತ್ಯ	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	ಸಂಪಿಗೆಹಳ್ಳಿ	ಎಂ. ಎಸ್. ಕಾಲೇಜ್ ಕಾಂಪೌಂಡ್	ಸರ್ಕಾರ್.	105	ಎ. ಗು. 3 13	ರೂ. ಆ. 4 8	ಸಿನೋಟುಗಳ ಅಥವಾ ರಸ್ತೆ	ಪಿಪ್ಪರಗೌಡನ ಜಮೀನು	ಅನಿನ್ಯೂರಸ್	ಸೆಂಟ್ ಮಾರ್ಕ್ಸ್ ಚರ್ಚ್‌ಯಾರ್ಡ್ ರಸ್ತೆ
					106	9 23	11 0				
					107	1 5	7 8				
					109	0 3	0 4				
					110	4 2	1 12				
						18 6	25 0				

ತಾರೀಖು 19ನೆ ಮಾರ್ಚ 1907.

ನಂ. ರೆ. 8602—ಲ್ಯಾ. ರೆ. 479-06—3, ಸ್ರ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷರ್ ರಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ತೀರ್ಥಕೆರೆ ತಾಲ್ಲೂಕು ಬಳೇನಹಳ್ಳಿ ಮತ್ತು ಪೆದವೇನಹಳ್ಳಿ ಗ್ರಾಮಗಳ ದನಗಳು ತಿರುಗಾಡಲು ದಾರಿ ಮಾಡುವು

ದಕ್ಕೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ತೀರ್ಕರ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜವಿಾನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಪೇಶ್ಕಾರಿನ ವಿಸ್ತೀರ್ಣ.	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ಕಡೂರು.	ತರೀಕೆರೆ.	ತರೀಕೆರೆ.	ಬಳೇನಹಳ್ಳಿ.	ಚೆಂದಯ್ಯ ಬಿನ್ ಮುಲ್ಲಯ್ಯ	27	ಖುಷ್ಕಿ	1 14	1 14	0 4	ರೈಲ್ವೆ ಗೇಟು.	ಬಳೇನಹಳ್ಳಿ ಗ್ರಾಮ.	ಸರ್ವೆ 27ನೆ ನಂಬರು.	ಸರ್ವೆ 27ನೆ ನಂಬರು.
				ಡಿಟೋ ..	24	ಡಿಟೋ	3 16	2 8	0 15	ಬಳೇನಹಳ್ಳಿ ಗ್ರಾಮ.	ರೈಲ್ವೆ ಗೇಟು.	ರುದ್ರಯ್ಯಬಿನ್ ನಂಜೈಯ್ಯನ ಜವಿಾನು.	ಸರ್ವೆ 26ನೆ ನಂಬರು.
				ಕೂಡ್ಲಿ ಮಠದ ಮಹಿವಾಟದಾರ ಸುಬ್ಬಣ್ಣಾಚಾರ್.	15	ಡಿಟೋ	12 29	8 0	0 19	ಶಿವಮೊಗ್ಗೆಗೆ ಹೋಗುವ ಛಾಟಿ ಮಾರ್ಗ.	ಪೆರವೇನಹಳ್ಳಿ ಗ್ರಾಮ.	ಶಿವಮೊಗ್ಗೆಗೆ ಹೋಗುವ ಛಾಟಿಮಾರ್ಗ.	ಪೆರವೇನಹಳ್ಳಿ ಗ್ರಾಮ.

ತಾರೀಖು 2ನೆ ಮಾರ್ಚಿ 1907.

ನಂ. ಆರ್. 8675—ಎಲ್. ಆರ್. 490—06—1, ಸುಧಾರಿಸು ಮೇಲಿನ ಹಾಳತವನ್ನು, ತೆಗೆದುಹಾಕಿ ಪ್ರಕಟಿಸಿದ 1907ನೆ ಇಸವಿಯ ಮಾರ್ಚಿ 14ನೆ ತಾರೀಖಿನ ಸೈ. 6878—88ನೆ ನಂಬರಿನ ಸರ್ಕಾರಿ ಹುಕುಮಿನ 4ನೆ ಪರಿಚ್ಛೇದವನ್ನನುಸರಿಸಿ 1907—08ನೆ ಸರ್ಕಾರಿ ವರ್ಷದಿಂದ ಮೈಸೂರು ಸಂಸ್ಥಾನದಲ್ಲಿರುವ ಅಡಕೆ ತೋಟಗಳ ಮೇಲಿನ ಕಂದಾಯದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ವರಿಯ ವಸೂಲಾತಿಯನ್ನು ಮಂಜೂರ್ಮಾಡಲು ಶ್ರೀಮರ್ ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ.

2. ಅಡಕೆಯ ಸಾಗುವಳಿ, ಅಡಕೆಯ ಮರಕ್ಕೆ ತಗುಲಬಹುದಾದ ರೋಗಗಳು ಇವೇಮೊದಲಾದ ಅಡಕೆ ತೋಟಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಶಾಸ್ತ್ರೀಯವಾಗಿ ವಿಚಾರಮಾಡುವುದಕ್ಕಾಗಿ ಬಂದು ಮೂಲಧನವನ್ನು ವಿಸರ್ಜಿಸುವುದಕ್ಕೋಸ್ಕರ ಸದರಿ ವರಿಯ ಹುಟ್ಟುವಳಿಯನ್ನು ಪ್ರತ್ಯೇಕವಾಗಿ ಇಡಲಾಗುವುದು.

ತಾರೀಖು 25ನೆ ಮಾರ್ಚಿ 1907.

ನಂ. ಆರ್. 8765-ಫಾ. 19-06—11, 1900ನೆ ಇಸವಿಯ 11ನೆ ನಂಬರ್ ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, 1907ನೆ ಇಸವಿಯ ಮೇ ಗುರೆ ತಾರೀಖಿನ ಲಾಗಾಯಿತು ಈ ಇಸ್ತಿಹಾರ್‌ನಾಮೆಗೆ ಲಗತ್ತು ಮಾಡಿರುವ ಷೆಡ್ಯೂಲಿನಲ್ಲಿ ತೋರಿಸಿದ ಹದ್ದು ಬಂದಿಗಳೊಳಗಿರುವ ಪ್ರದೇಶವು, ಸದರಿ ಇಸ್ತಿಹಾರ್‌ನಾಮೆಯ ಕೆಳಗೆ ನಮೂದಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, "ಸಂಸ್ಥಾನ ಜಂಗಲಿ" ಎಂದು ಭಾವಿಸಲ್ಪಡುವುದೆಂತ ಪ್ರಕಟಿಸಲು ಮೈಸೂರು ಸರ್ಕಾರದವರು ಹುಕುಂ ಪಡಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ತಾಕಿನ ಹೆಸರು.	ಹದ್ದುಬಂದಿ.
ಮೈಸೂರು.	ಹೆಗ್ಗಡದೇವನಕೋಟೆ.	11·98 ಚದರ ಮೈಲಿಗಳು.	ಮೇಟಿಕುಪ್ಪೆ ಪೂರ್ವ ಒಡೆಯರ.	ಉತ್ತರಕ್ಕೆ.—ಮೇರೆಯು ರೇಖೆಯು ಅಗಸನಹುಂಡಿ, ಮೇಟಿಕುಪ್ಪೆ ಕಾವಲು ಮತ್ತು ಮೇಟಿಕುಪ್ಪೆ ಸಂಸ್ಥಾನ ಜಂಗಲಿಯ (ಅಗಸನಹುಂಡಿ ಗ್ರಾಮದ ಸರ್ವೆ 11ನೆ ನಂಬರಿನ ನೈರುತ್ಯ ಮೂಲೆ) ಮುಕ್ಕುಪ್ಪೆಯಿಂದ ಹೊರಟು, ಪೂರ್ವಕ್ಕೆ ಅಗಸನಹುಂಡಿ ಗ್ರಾಮದ ಸರ್ವೆ 11ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅಗಸನಹುಂಡಿ ಮೇಟಿಕುಪ್ಪೆ, ಮತ್ತು ಮೇಟಿಕುಪ್ಪೆಯ ಕಾವಲುಗಳ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ಮೇಟಿಕುಪ್ಪೆ ಗ್ರಾಮದ 60ನೆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ; ಅಲ್ಲಿಂದ ಮೇಟಿಕುಪ್ಪೆ ಮತ್ತು ಜಗತೆಕುಪ್ಪೆ ಗ್ರಾಮಗಳ ನಡುವೆ ಸರಹದ್ದಿನಲ್ಲಿ ಜಗತೆಕುಪ್ಪೆ ಗ್ರಾಮದ ಸರ್ವೆ 4ನೆ ನಂಬರಿನ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ; ಅಲ್ಲಿಂದ ವಾಯವ್ಯಕ್ಕೆ ಜಗತೆಕುಪ್ಪೆ ಗ್ರಾಮದ ಸರ್ವೆ 4ನೆ ನಂಬರಿನ ಆಗ್ನೇಯ ಮೇರೆಯಲ್ಲಿ ಜಗತೆಕುಪ್ಪೆ ಗ್ರಾಮದ 4ನೆ ಮತ್ತು ಮೇಟಿಕುಪ್ಪೆ ಗ್ರಾಮದ 58, 57ನೆ ಸರ್ವೆ ನಂಬರುಗಳ ಮುಕ್ಕುಪ್ಪೆ ಬಾಂದುಗಳಿಗೆ ಹೋಗುತ್ತದೆ;